# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿನ ಪ್ರಶ್ನೆ | : | 89 (804) |
| ಸದಸ್ಯರಹೆಸರು | : | ಶ್ರೀಎಂ.ಎಲ್ ಅನಿಲ್ ಕುಮಾರ್ (ಸ್ಥಳೀಯಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವದಿನಾಂಕ | : | 16/12/2024. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು . |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆರ್ ಟಿ ಇ ಕಾಯ್ದೆಯ ಉದ್ದೇಶವೇನು; ಆರ್ ಟಿ ಇ ಕಾಯ್ದೆಯಡಿಯಲ್ಲಿ ವಿದ್ಯಾರ್ಥಿಗಳ ಆಯ್ಕೆ ಯಾವ ರೀತಿ ನಡೆಯುತ್ತದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ➢ 6 ರಿಂದ 14 ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.<br>➢ ಸರ್ಕಾರದ ಆದೇಶ ಸಂಖ್ಯೆ:ಇಡಿ 273 ಮಾಹಿತಿ 2014 ದಿನಾಂಕ:14.01.2015ರನ್ವಯ ಆರ್.ಟಿ.ಇ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಆನ್‌ಲೈನ್ ಲಾಟರಿ ಮೂಲಕ ಪಾರದರ್ಶಕವಾಗಿ ನಿರ್ವಹಿಸಲಾಗುತ್ತಿದೆ.<br>➢ ಶಿಕ್ಷಣ ಹಕ್ಕು ಕಾಯಿದೆ 2009 ರ ಸೆಕ್ಷನ್ 12(1)(ಬಿ) ಅಡಿ ಅನುದಾನಿತ ಶಾಲೆಗಳು ಮತ್ತು 12(1)(ಸಿ)ಅಡಿಯಲ್ಲಿ ಅನುದಾನರಹಿತ ಶಾಲೆಗಳಿಗೆ 25% ಮೀಸಲಾತಿಯನ್ವಯ ಅನಾನುಕೂಲ ಪರಿಸ್ಥಿತಿಯಲ್ಲಿರುವ ಹಾಗೂ ದುರ್ಬಲ ವರ್ಗದ ನೆರೆಹೊರೆಯಲ್ಲಿನ ಮಕ್ಕಳಿಗೆ ಸೀಟುಗಳನ್ನು ಹಂಚಿಕೆ ಮಾಡಲಾಗುವುದು.<br>➢ ಸರ್ಕಾರದ ಆದೇಶ ಸಂಖ್ಯೆ:ಇಡಿ 51 ಪಿಜಿಸಿ 2016(ಪಿ) ದಿನಾಂಕ:08.02.2016ರನ್ವಯ ಅನಾನುಕೂಲ ಮತ್ತು ದುರ್ಬಲ ವರ್ಗಗಳನ್ನು ಗುರುತಿಸಲಾಗಿದ್ದು ವಿವರಗಳು ಈ ಕೆಳಕಂಡಂತಿದೆ:-<br>• ಅನಾಥ ಮಗು<br>• ಹೆಚ್.ಐ.ವಿ ಸೋಂಕಿತ/ಬಾಧಿತ ಮಗು<br>• ಮಂಗಳಮುಖಿ<br>• ವಿಶೇಷ ಅಗತ್ಯತೆಯುಳ್ಳ ಮಗು<br>• ವಲಸೆ/ಬೀದಿ ಮಗು<br>• ಬರಗಾಲದ ಕಾರಣ ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬದ ಮಗು<br>• ಪರಿಶಿಷ್ಟ ಜಾತಿ<br>• ಪರಿಶಿಷ್ಟ ಪಂಗಡ<br>• ಪ್ರವರ್ಗ 1,<br>• ಪ್ರವರ್ಗ 2ಎ,<br>• ಪ್ರವರ್ಗ 2ಬಿ,<br>• ಪ್ರವರ್ಗ 3ಎ, |

- ಪ್ರವರ್ಗ 3ಬಿ
- ದುರ್ಬಲ ವರ್ಗ.

ಆರ್.ಟಿ.ಇ ಅಡಿ 25% ಸೀಟುಗಳನ್ನು ಈ ಕೆಳಕಂಡಂತೆ ಮೀಸಲಿರಿಸಲಾಗಿದೆ.

1. ಎಸ್.ಸಿ ವರ್ಗಕ್ಕೆ ಮೀಸಲಾತಿ - 7.5%
2. ಎಸ್.ಟಿ ವರ್ಗಕ್ಕೆ ಮೀಸಲಾಗಿ - 1.5%
3. ಇತರೆ ಪ್ರವರ್ಗದ ಮಕ್ಕಳಿಗೆ - 16%

➢ ಸರ್ಕಾರಿ ಆದೇಶ ಸಂಖ್ಯೆ: ಇಡಿ 36 ಪಿಜಿಸಿ 2018 ದಿನಾಂಕ:30.01.2019ರ ಸರ್ಕಾರಿ ಆದೇಶದನ್ವಯ, "ಅವಕಾಶ ವಂಚಿತ ಅಥವಾ ದುರ್ಬಲ ವರ್ಗದ ಮಕ್ಕಳ ಪ್ರವೇಶಾತಿಗಾಗಿ ನೆರೆಹೊರೆ ಸರ್ಕಾರಿ ಅಥವಾ ಅನುದಾನಿತ ಶಾಲೆಗಳು ಲಭ್ಯವಿದ್ದಲ್ಲಿ 2ನೇ ಪ್ರಕರಣದ (ಎನ್) ಖಂಡದ (iv) ನೇ ಉಪ –ಖಂಡದ ಅಡಿಯಲ್ಲಿ ಬರುವ ಯಾವುದೇ ಅನುದಾನರಹಿತ ಶಾಲೆಯನ್ನು ಗುರುತಿಸತಕ್ಕದ್ದಲ್ಲ" ಎಂದು ಆದೇಶವಾಗಿರುತ್ತದೆ. ಅದರಂತೆ 2019-20ನೇ ಸಾಲಿನಿಂದ ಆರ್.ಟಿ.ಇ ದಾಖಲಾತಿಗೆ ಕ್ರಮವಹಿಸಲಾಗುತ್ತಿದೆ.

➢ ಆರ್.ಟಿ.ಇ ಕಾಯ್ದೆಯಡಿಯಲ್ಲಿ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯು ಆನ್‌ಲೈನ್ ತಂತ್ರಾಂಶದ ಮೂಲಕ ವಿವಿಧ ಹಂತಗಳಲ್ಲಿ ನಡೆಯುತ್ತಿದ್ದು, ಸದರಿ ಪ್ರಕ್ರಿಯೆ ಈ ಕೆಳಕಂಡಂತಿರುತ್ತದೆ:-

1. ನೆರೆಹೊರೆಯ ಎಲ್ಲಾ ಶಾಲೆಗಳನ್ನು ಮ್ಯಾಪಿಂಗ್ ಮಾಡುವುದು. ಹಾಗೂ ಅರ್ಹ ಶಾಲೆಗಳ ಪಟ್ಟಿ ಪ್ರಕಟಿಸುವುದು.
2. ಶಾಲೆಗಳಲ್ಲಿ ಲಭ್ಯವಿರುವ ಸೀಟುಗಳ ಪಟ್ಟಿ ಪ್ರಕಟಿಸುವುದು.
3. ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವುದು ಹಾಗೂ ದಾಖಲೆಗಳ ನೈಜತೆಯನ್ನು ಆನ್‌ಲೈನ್ ಮೂಲಕ ಪರೀಕ್ಷಿಸುವುದು.
4. ಅರ್ಜಿಗಳಲ್ಲಿನ ದೋಷಗಳ ಕುರಿತು ಪೋಷಕರಿಗೆ ಎಸ್.ಎಂ.ಎಸ್ ರವಾನಿಸಿ ಸರಿಪಡಿಸಿ ಸಲ್ಲಿಸಲು ತಿಳಿಸುವುದು.
5. ಇ.ಐ.ಡಿ ಮತ್ತು ವಿಶೇಷ ಪ್ರವರ್ಗದಡಿ ಸಲ್ಲಿಸಿರುವ ಅರ್ಜಿಗಳ ನೈಜತೆಯ ಪರಿಶೀಲನೆಯನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸುವುದು.
6. ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದು.
7. ಆನ್‌ಲೈನ್ ಲಾಟರಿ ಮೂಲಕ ಸೀಟು ಹಂಚಿಕೆ ಮಾಡುವುದು.

| | | |
|---|---|---|
| | | 8. ಪೋಷಕರ ಮೊಬೈಲ್ ಸಂಖ್ಯೆಗೆ ಸೀಟು ಹಂಚಿಕೆ ಬಗ್ಗೆ ಎಸ್.ಎಂ.ಎಸ್ ಕಳುಹಿಸುವುದು.<br>9. ಶಾಲಾ ಲಾಗಿನ್ ಮೂಲಕ ಆನ್‌ಲೈನ್ ದಾಖಲಾತಿ ಪ್ರಕ್ರಿಯೆ ನಿಯಮಾನುಸಾರ ನಡೆಯುತ್ತದೆ. |
| ಆ) | ಆರ್ ಟಿ ಇ ಕಾಯ್ದೆಯ ಅನುಷ್ಠಾನದಿಂದ 1 ರಿಂದ 8ನೇ ತರಗತಿಯವರೆಗೆ ಪ್ರವೇಶ ಶುಲ್ಕವನ್ನು ಸರ್ಕಾರವೇ ನೀಡುತ್ತಿದ್ದು; 8ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ ವರೆಗೂ ಈ ಯೋಜನೆಯನ್ನು ವಿಸ್ತರಿಸುವುದರಿಂದ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿರುವ ಬಡ ಮಕ್ಕಳಿಗೆ ಅನುಕೂಲವಾಗಲಿದ್ದು, ಸರ್ಕಾರವು ಈ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಚಿಂತಿಸಿದೆಯೇ; ಇಲ್ಲದಿದ್ದಲ್ಲಿ ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ವಿಸ್ತರಿಸಲಾಗುವುದು; | ವಿಸ್ತರಿಸುವ ಪ್ರಸ್ತಾವನೆ ಇರುವುದಿಲ್ಲ. |
| ಇ) | ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯ ಕ್ರಮವನ್ನು ಅಳವಡಿಸದಿರಲು ಕಾರಣವೇನು; ಸರ್ಕಾರಿ ಶಾಲೆಗಳಲ್ಲಿ ಸಿಬಿಎಸ್‌ಇ ಪಠ್ಯಕ್ರಮ ಇಲ್ಲದೇ ಇರುವುದರಿಂದ ಆರ್‌ಟಿಇ ಕಾಯ್ದೆಯಡಿ ಬಡ ಮಕ್ಕಳು ಖಾಸಗಿ ಶಾಲೆಗಳಿಗೆ ದಾಖಲಾಗುತ್ತಿದ್ದು, ಸರ್ಕಾರಿ ಶಾಲೆಗಳಲ್ಲಿಯೂ ಸಿಬಿಎಸ್‌ಇ ಪಠ್ಯಕ್ರಮ ಜಾರಿಗೊಳಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ? (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತುತ ರಾಜ್ಯ ಪಠ್ಯ ಕ್ರಮದ 6 ರಿಂದ 10ನೇ ತರಗತಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ CBSE ಪಠ್ಯಕ್ರಮವನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ |

ಸಂಖ್ಯೆ: ಇಪಿ 402 ಪಿಜಿಸಿ 2024

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು